to advise the workers suitably and guide them on right lines so that an early settlement could be reached, otherwise I would refer the matter for adjudication.

ಶ್ರೀ ಪಾಟೀಲ್ ನಾಗರಾಜ್.—ತಮ್ಮ ಮೂಲಕ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈಗ 35 ಜನರಮೇಲೆ ಕೇಸು ಹಾಕಿದ್ದಾರೆ. ಅವರಲ್ಲಿ ಕೆಲವರು ಊರಿನಲ್ಲೇ ಇರಲಿಲ್ಲ. ಹಾಗಿರುವಾಗ ಸತ್ಯಕ್ಕೆ ದೂರವಾಗಿ ಕೇಸು ಹಾಕಿದ್ದಾರೆ. ಆದುದರಿಂದ ಆ 35 ಜನರ ಮೇಲೆ ಹಾಕಿರುವ ಕೇಸುಗಳನ್ನು ಒತ್ತಾಯಮಾಡದೆ ಅವರಿಗೆ ಸಂಪೂರ್ಣವಾಗಿ ಸಂಬಳ ಕೊಡುವ ಏರ್ಪಾಡು ಮಾಡಬೇಕು ಎಂದು ಒತ್ತಾಯಮಾಡುತ್ತೇನೆ. ಹಾಗೆ ಮಾಡಿ ಒಂದು ಒಳ್ಳೆಯ ವಾತಾವರಣ ಕಲ್ಪಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಅಜೀಜ್ ಸೇಠ್.—ಇದರ ವಿಚಾರ ನನಗೂ ಮತ್ತು ಶ್ರೀ ಪಾಟೀಲ್ ನಾಗರಾಜ್ ಅವರಿಗೂ ಗೊತ್ತಿದೆ. ನನ್ನ ಮೇಲೆ 54 ಕ್ರಿಮಿನಲ್ ಕೇಸುಗಳಿದ್ದವು. ಕೇಸುಗಳನ್ನು ಹಾಕಿದಮೇಲೆ ಏನೂ ಮಾಡುವುದಕ್ಕಾಗುವುದಿಲ್ಲ. ಅವು ತೀರ್ಮಾನವಾಗಬೇಕು. Now it is for the labour leaders to come to the rescue of the workmen and advise them to desist from violence. After all by such strikes the production of the nation would suffer. You will be surprised to know that our labbour in the whole of South India gets Rs. 500 per month by way of salary and other incentives.

ಶ್ರೀ ಕಾಗೋಡು ತಿಮ್ಮಪ್ಪ.—ನಾನೊಂದು ಗಮನಸೆಳೆಯುವ ಸೂಚನೆ ಕಳಿಸಿದ್ದೆ.

ಅಧ್ಯಕ್ಷರು.—ಅದು ಬೆಳಿಗ್ಗೆ ತಾನೆ ಬಂದಿದೆ, ನಾನು ವಿಚಾರಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

SCARCITY CONDITIONS AND FEE EXEMPTIONS TO STUDENTS IN BIJAPUR AND SOME OTHER DISTRICTS.

ಶ್ರೀ ಜೆ. ಎಲ್. ಕಬಾಡಿ (ಬಳ್ಳಿಗಿ).—ಬಿಜಾಪುರವಲ್ಲಿ ಪರಿಸ್ಥಿತಿ ಬಹಳ ಕೆಟ್ಟಿದೆ ಈ ಬಗ್ಗೆ 29 ರಂದು ಮುಖ್ಯಮಂತ್ರಿಗಳಿಗೆ ತಂತಿ ಕಳಿಸಿದ್ದೆವು. ಆದರೂ ಪರಿಹಾರ ಹುಡುಕಿಲ್ಲ. ಅಲ್ಲಿಯ ಪರಿಸ್ಥಿತಿ ಗಂಭೀರವಾಗಿದೆ ಗೂಂಡಾಗಳು ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ಈಗಿಂದೀಗಲೆ ಸರಕಾರ ಒಂದು ಸ್ಟೇಟ್‌ಮೆಂಟ್ ಮಾಡಿ ಇರುಗೆ ಪರಿಸ್ಥಿಯನ್ನು ಹೋಗಲಾಡಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ, ಗುಲ್ಬರ್ಗ, ರಾಯಚೂರು, ಬಿಜಾಪುರ ಮುಂತಾದ ಕಡೆಗಳಲ್ಲೆಲ್ಲಾ ಇವೇ ಪರಿಸ್ಥಿತಿಯಿದೆ. ಆದುದರಿಂದ ಗಮನ ಸೆಳೆಯುವ ಸೂಚನೆ ಕಳಿಸಿದ್ದೇನೆ.

ಅಧ್ಯಕ್ಷರು.—ತಮ್ಮಿಂದ ಬಂದಿರುವುದನ್ನು ಹತ್ತು ನಿಮಿಷಗಳ ಕೆಳಗೆ ಸರಕಾರಕ್ಕೆ ಕಳುಹಿಸಿದ್ದೇನೆ.

2-30 P.M.

ಶ್ರೀ ಎಸ್. ಬೈ. ಪಾಟೀಲ್.—ಈಗ ರಾಜ್ಯದ ಅನೇಕ ಭಾಗಗಳಲ್ಲಿ ಈ ಗಲಾಟೆ ಹೆಚ್ಚಾಗುತ್ತಿದೆ. ಆದರೆ ಅದೇ ರೀತಿಯಲ್ಲಿ ನಮ್ಮ ಕಲ್ಬುರ್ಗಿಯಲ್ಲೂ ಗಲಾಟೆಗೆ ಅವಕಾಶ ಕೊಡುವುದು ಬೇಡ ಎಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ....

ನಾನು ಅಲ್ಲಿ ಸ್ಥಳಗಳಿಗೆ ಹೋಗಿ ಖುದ್ದಾಗಿ ನೋಡಿಕೊಂಡು ಬಂದಿದ್ದೇನೆ, ಅಲ್ಲಿನ ಪರಿಸ್ಥಿತಿ ಕೂಡ ಬಹಳ ಗಂಭೀರವಾಗಿದೆ.

ಅಧ್ಯಕ್ಷರು.—ಆ ಮಾನ್ಯ ಸದಸ್ಯರು ಇನ್ನೂ ಈಗ ತಾನೆ ಆ ಸೂಚನೆಯನ್ನು ನನ್ನ ಕಡೆಗೆ ಕಳುಹಿಸಿದ್ದಾರೆ. ಅದನ್ನು ನಾನು ತಕ್ಷಣ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ....

ಶ್ರೀ ಜೆ. ಎಲ್. ಕಬಾಡಿ.—ನಾನು ಮುಖ್ಯ ಮಂತ್ರಿಗಳಿಗೆ ಇದೇ ವಿಚಾರದಲ್ಲಿ ತಾರೀಖು 29-11-72ಕ್ಕೆ ತಂತಿಯನ್ನು ಕಳುಹಿಸಿದ್ದಾಗ್ಗೂ ಮತ್ತು ಅಲ್ಲಿ ಜನರಲ್ಲಿ ಅಶಾಂತಿ ಮೂಡುವುದಕ್ಕೆ ಅವಕಾಶ ಮಾಡಬಾರದೆಂದು ವಿನಂತಿಸಿಕೊಂಡಿದಾಗ್ಗೂ ಅವರೇನೂ ಹೇಳಿಕೆಯನ್ನೇ ಇಲ್ಲಿಯತನಕ ಕೊಟ್ಟಿಲ್ಲ. ನಾನು ತಮ್ಮ ಮೂಲಕ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಅಲ್ಲಿ ಶಾಂತಿಪ್ರಾತಾವರಣ ಕಲಕುವುದಕ್ಕೆ ಮುನ್ನ ಅಲ್ಲಿನ ಶಾತಿಪಾಲನೆ ಮಾಡಬೇಕು. ಅದಕ್ಕೆ ಉಚಿತವಾದ ಒಂದು ಹೇಳಿಕೆಯನ್ನು ಸರ್ಕಾರದವರು ಕೂಡಲೇ ಈ ಸದನದಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ತಾವು ನನಗೆ ಎರಡು ಮಾತನಾಡುವುದಕ್ಕೆ ಅವಕಾಶ ಕೊಡುವುದಾದರೆ ಒಂದು ವಿಷಯವನ್ನು ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ನಾನು ಇದೇ ವಿಚಾರದಲ್ಲಿ ಇದೇ ಸಭೆಯಲ್ಲಿ ಒಂದು ವರದಿಯನ್ನ ಮಾಡಿದ್ದೇನೆ. ಅದರಂತೆ ಅಧಿಕಾರಿಗಳು ಕಾರ್ಯಕ್ರಮ ಕೈಗೊಳ್ಳುತ್ತಾರೆ...

ಶ್ರೀ ಎಸ್. ಮೈ. ಪಾಟೀಲ್.—ಅಧ್ಯಕ್ಷರೇ ಆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಮಾತನಾಡುತ್ತಾ ತಿಂಗಳಿಗೆ ಸುಮಾರಿಗೆ 500 ರೂಪಾಯಿಗಳಿಗಿಂತ ಕಡಿಮೆ ವರಮಾನ ಇದೆಯೋ ಅಂಥವರ ಮಕ್ಕಳಿಗೆ ಫೀ ಎಗ್ಜಂಪ್ಷನ್ ಮಾಡಲಾಗುತ್ತದೆ ಎಂದು ಹೇಳಿದರು. ಆದರೆ ಅವರು ಆ ಮಾತನ್ನು ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳ ಕ್ಷಾಮದ ಪರಿಸ್ಥಿತಿಯನ್ನು ಚರ್ಚೆ ಮಾಡುತ್ತಿದ್ದಾಗ ಈ ಮಾತುಗಳನ್ನು ಇವರು ಹೇಳಿದ್ದಾರೆ. ಆದರೆ ಅದೇ ಭೀಕರ ಕ್ಷಾಮದ ಪರಿಸ್ಥಿತಿ ನಮ್ಮ ಬಿಜಾಪುರ ಜಿಲ್ಲೆಯಲ್ಲೂ ಇದೆ. ಅವರ ವಿಚಾರದಲ್ಲಿ..

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರುಗಳು ಹೀಗೆ ಚರ್ಚೆಮಾಡುತ್ತಾ ಹೋದರೆ ಇದಕ್ಕೆ ಕೊನೆ ಮೊದಲು ಎನ್ನುವುದೇ ಇರುವುದಿಲ್ಲ. ಈ ಹಿಂದೆ ಮಾನ್ಯ ಅಧ್ಯಕ್ಷರೇ ನಾನು ತಮ್ಮ ಎದುರಿನಲ್ಲೇ ಈ ವಿಚಾರವಾಗಿ ಸ್ಪಷ್ಟವಾದ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಆ ಹೇಳಿಕೆ ಪತ್ರಿಕೆಗಳಲ್ಲಿ ವರದಿಯಾಗಿದೆ ಎಂದು ಹೇಳುತ್ತಿದ್ದಾರೆ. ನಾನು ಅದನ್ನು ನೋಡಿಲ್ಲ ಅಗತ್ಯವಿದ್ದ ಸ್ಥಳಗಳಿಗೆ, ಆ ರಿಯಾಯಿತಿಯನ್ನು ಕೊಟ್ಟಿದ್ದರೆ ಬಿಜಾಪುರದವರೇಕೆ ವಿನಾಕಾರಣ ಗಲಾಟೆ ಮಾಡಬೇಕು?

ಶ್ರೀ ಜೆ. ಎಲ್. ಕಬಾಡಿ.—ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಏನು ಪರಿಸ್ಥಿತಿ ಇದೆಯೋ ಅದೇ ಪರಿಸ್ಥಿತಿ ಬಿಜಾಪುರದಲ್ಲೂ ಇದೆ. ಆದ್ದರಿಂದ ಅಲ್ಲಿನ ವಿಚಾರದಲ್ಲಿ ಸರ್ಕಾರದವರ ನಿಲುವೇನು?

ಶ್ರೀ ಡಿ. ದೇವರಾಜ ಅರಸ್.—ಡಿಸ್ಟ್ರೆಸ್ ಏರಿಯಾಕ್ಕೆ ಒಂದು ಕನ್ಸೆಷನ್ ಕೊಡೋಣ ಎಂದು ಹೇಳಿ ಅಲ್ಲಿಗೆ ಈ ರಿಯಾಯಿತಿಯನ್ನು ಕೊಟ್ಟಿದ್ದರೆ ಆ ನೆಪದಲ್ಲಿ ರಾಯಚೂರಿಗೂ ಕೊಡಿ, ಬಿಜಾಪುರಕ್ಕೂ ಕೊಡಿ ಎಂದುವಾದ ಮಾಡುವುದಕ್ಕೆ ಹೊರಟರೆ ಅದನ್ನು ಕೇಳುವುದಕ್ಕೆ ಸರ್ಕಾರ ತಯಾರಿಲ್ಲ. ಹಾಗೆ ಎರಡಾ ಕಡೆಗೂ ರಿಯಾಯಿತಿ ಕೊಡುವುದಕ್ಕೆ ಸಾಧ್ಯವೂ ಇಲ್ಲ.

ಶ್ರೀ ಎಸ್. ಮೈ. ಪಾಟೀಲ್.—ಅಧ್ಯಕ್ಷರೇ ನಾನು ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೆ.—ರಾಜ್ಯದ ಯಾವ ಯಾವ ಭಾಗದಲ್ಲಿ ಸ್ಕೇರ್ಸಿಟಿ ಕಂಡೀಷನ್ ಇರುತ್ತೆ ಅಲ್ಲಗೆ ಮಾತ್ರ ಈ ರಿಯಾಯಿತಿಯನ್ನು ಕೊಡಲಾಗುತ್ತದೆ ಎಂದು ಹೇಳಿ. ಯಾವ ಏರಿಯಾದಲ್ಲಿ ಅಫೆಕ್ಟಾಗಿದೆ, ಎಲ್ಲಿ ಅಫೆಕ್ಟಾಗಿಲ್ಲ ಎಂಬುದನ್ನು ತಿಳಿಸುವುದಕ್ಕೆ ಡಿ. ಸಿ. ಗೆ ಮುಖ್ಯಮಂತ್ರಿಗಳು ಒಂದು ಆಜ್ಞೆ ಮಾಡಿದರಾಯಿತು, ಹಾಗೆ ಮಾಡದೆ ವಿನಾಕಾರಣ ಇಂಗಿ ಸಿಂದಿಗಿ ತಾಲ್ಲೂಕುಗಳಿಗೆ ಇದು ಅನ್ವಯಿಸುವುದಿಲ್ಲ ಎಂದರೇನು ಅರ್ಥ? ಒಂದು ತಾಲ್ಲೂಕಿನಲ್ಲಿ ಒಂದೂರಲ್ಲಿ ಕಂಡೀಷನ್ ಬಹಳ ಹದಗೆಟ್ಟಿರಬಹುದು, ಇನ್ನೊಂದೂರಲ್ಲಿ ಸ್ವಲ್ಪ ಉತ್ತಮ ಇರಬಹುದು. ಅಂಥಾ ಕಡೆ ಅವರೇಜ್ ಕಂಡೀಷನ್ ಏನೆಂಬುದನ್ನು ಪರಿಶೀಲನೆ ಮಾಡದೆ, ಯಾವುದೋ ಒಂದು ಊರಿನಲ್ಲಿ ಕಂಡೀಷನ್ ಸ್ವಲ್ಪ ಚೆನ್ನಾಗಿದ್ದಾಕ್ಷಣಕ್ಕೆ ಇಡೀ ತಾಲ್ಲೂಕೆಲ್ಲಾ ಬಂಪರ್ ಕ್ರಾಪ್ ಇದೆ ಎಂದು ಹೇಳಿದರೆ ಏನು ಹೇಳಬೇಕು? ಸರ್ಕಾರದವರು ಇದಕ್ಕೆ ಬದಲಾಗಿ ಇಂಥ ತಾಲ್ಲೂಕಿಗೆ ಕೊಡುತ್ತೇವೆ, ಇಂಥಾ ತಾಲ್ಲೂಕಿಗೆ ಕೊಡುವುದಿಲ್ಲ ಎಂಬುದನ್ನಾದರೂ ಖಚಿತವಾಗಿ ತಿಳಿಸಿಬಿಡಿ! ನಾವು ಅಲ್ಲಿನ ಪರಿಸ್ಥಿತಿಯನ್ನು ಖುದ್ದು ನೋಡಿಕೊಂಡು ಬಂದಿದ್ದರೂ ನಮ್ಮ ಮಾತಿಗೆ ಬೆಲೆ ಇಲ್ಲದ ಮೇರೆ ನಾವಾದರೂ ಏಕೆ ಇಲ್ಲಿ ಬಂದು ಕುಳಿತಿರಬೇಕು? ಕಾರಣವಿಲ್ಲದೆ ಧಾಂಧಲೆ ಮಾಡತಕ್ಕವರಿಗೆ ಶಿಕ್ಷೆ ಮಾಡಿ. ಆ ವಿದ್ಯಾರ್ಥಿಗಳ ಗುಂಪಿನಲ್ಲಿ ಕಮ್ಯುನಿಸ್ಟರು ಸೇರಿಗರಾಟೆ ಮಾಡುತ್ತಿದ್ದಾರೆ. ಅದಕ್ಕೆ ವಿದ್ಯಾರ್ಥಿಗಳು ಕಾರಣರಲ್ಲ. ಅವರು ಆ ಹುಡುಗರ ಹೆಸರನ್ನು ಕೆದಿನುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನಾನು ಇಲ್ಲಿ ಹೇಳಿಕೆಯನ್ನು ಕೊಟ್ಟ ಕೂಡಲೇ ಆ ವಿಚಾರವನ್ನು ಜಿಲ್ಲಾಧಿಕಾರಿಗಳಿಗೂ ಮತ್ತು ಇತರೇ ಸಂಬಂಧಪಟ್ಟ ಅಧಿಕಾರಿಗಳಿಗೂ ಮತ್ತು ಆ ವಿದ್ಯಾರ್ಥಿಗಳಿಗೂ ತಿಳಿಸುವಂತೆ, ಡೈರೆಕ್ಷನ್ ಕಳುಹಿಸಲಾಗಿದೆ. ಈ ವಿಚಾರದಲ್ಲಿ ಯಾರೂ ಅನುಮಾನ ಪಡಬೇಕಾದ್ದಿಲ್ಲ. ಪತ್ರಿಕೆಯಲ್ಲಿ ಬಂದಿರತಕ್ಕ ಹೇಳಿಕೆ ಒಂದು ವೇಳೆ ಸರಿಯಾಗಿಲ್ಲದಿರಬಹುದು. ಆ ವಿದ್ಯಾರ್ಥಿಗಳಿಗೆ ಸರಿಯಾದ ವಿಷಯ ಗ್ರಹಿಕೆ ಇಲ್ಲದೆ ಅವರು ಅನೇಕ ವೇಳೆ ತಪ್ಪುದಾರಿಗೆ ಹೋಗತಕ್ಕ ಸಂದರ್ಭಗಳೂ ಇರುತ್ತವೆ. ಈ ಆಜ್ಞೆಯಾನ ತಾರ್ಲೊಕಿಗೆ ಯಾವ ಗ್ರಾಮಕ್ಕೆ ಅನ್ವಯವುದನ್ನೆಲ್ಲಾ ಆ ಆಜ್ಞೆಯಲ್ಲಿ ವಿಶದಪಡಿಸಲಾಗಿದೆ. ಬಿಜಾಪುರದ ಜಿಲ್ಲೆಯಲ್ಲಿ ಯಾವ ಭಾಗಕ್ಕೆ ಕೊಡಬೇಕೆಂಬುದು ಅಲ್ಲಿನ ಅಧಿಕಾರಿಗಳಿಗೆ ಗೊತ್ತಿದೆ.

ಶ್ರೀ ಎಸ್. ಮೈ. ಪಾಟೀಲ್.—ಮುಖ್ಯಮಂತ್ರಿಗಳು ನಮಗೇಕೆ ಸ್ಪಷ್ಟವಾಗಿ ತಿಳಿಸಬಾರದು? ಪತ್ರಿಕೆಯವರಿಗೆ ಕೊಟ್ಟಿರತಕ್ಕ ಹೇಳಿಕೆಯನ್ನೇ ನಮಗೇಕೆ ಕೊಡಬಾರದು?

ಅಧ್ಯಕ್ಷರು.—ತಾವು ನಮಗೆ ಕೊಡಿ, ನಮಗೆ ಕೊಡಿ ಎಂದರೆ ಅವರು ಅಲ್ಲಿಂದ ಬಂದು ಕೊಡುವುದಕ್ಕಾಗುತ್ತದೆಯೇ? ಅವರ ಛೇಂಬರಿಗೆ ಹೋಗಿ ಕಾಣಿ. ಅಲ್ಲಿ ಮಾತನಾಡಿ

Constitution of a Study Team to Tour the drought affected Areas in the State

†**ಶ್ರೀ ವಾಟಾಳ್ ನಾಗರಾಜ್** (ಚಾಮರಾಜಪೇಟೆ):—ಕೊಡುತ್ತಾರೆ, ನೀವು ಕೂಡ್ರಿ ಪಾಟೀಲರೇ.

ಮಾನ್ಯ ಅಧ್ಯಕ್ಷರೇ, ಇತ್ತ ವಿರೋಧಪಕ್ಷದ ಸದಸ್ಯರುಗಳು ರಾಜ್ಯದಲ್ಲಿ ಕ್ಷಾಮದ ಪರಿಸ್ಥಿತಿ ಕುರಿತು ಒಂದು ವರದಿಯನ್ನು ಸರ್ಕಾರಕ್ಕೊಪ್ಪಿಸಲು ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಒಂದು ಹೇಳಿಕೆ ಈ ಸಭೆಯಲ್ಲಿ ಹೊರಬಿದ್ದಿತ್ತು. ಆ ಸಮಿತಿಯಲ್ಲಿ ಆಡಳಿತಪಕ್ಷದಿಂದ 11 ಜನ ಸದಸ್ಯರುಗಳು ಮತ್ತು ಇನ್ನು 9 ಜನ ಸದಸ್ಯರುಗಳನ್ನು ಬೇರೆ ಬೇರೆ ಪಕ್ಷಗಳಿಂದ ಆರಿಸಿ ಸೇರಿಸಲಾಗಿದ್ದಿತು. ಆದರೆ ಆ ಸಮಿತಿಯಲ್ಲಿ ಸದಸ್ಯರನ್ನು ಸೇರಿಸಲು ಕೈಬಿಟ್ಟಿದ್ದ ಪಕ್ಷಗಳೂ ಅನೇಕ ಇರುತ್ತವೆ. ಉದಾಹರಣೆಗೆ ಜನತಾ ಪಕ್ಷ, ಎಂ. ಇ. ಎಸ್. ಇತ್ಯಾದಿ. ಆದರೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಕ್ಯಾಬಿನೆಟ್‌ನಲ್ಲಿರತಕ್ಕ ಎಲ್ಲಾ ಮಂತ್ರಿಗಳೂ ಆ ಕ್ಷಾಮಪೀಡಿತ ಪ್ರದೇಶಗಳಿಗೆ ಒಂದಾವರ್ತಿಯಲ್ಲ ಹತ್ತಾರು ಸಲ ಹೋಗಿ ಬಂದಿರುತ್ತಾರೆ. ಹಾಗಿರುವಾಗ ಅವರ ಪಕ್ಷದಿಂದ 11 ಜನರು ಹೋಗಬೇಕಾದ ಪರಿಸ್ಥಿತಿ ಇರಲಿಲ್ಲ. ವಿರೋಧಪಕ್ಷವನ್ನು ಉದ್ದೇಶಪೂರ್ವಕವಾಗಿಯೇ ತುಳಿಯಬೇಕೆಂಬ ದೃಷ್ಟಿಯಿಂದ ಹಾಗೂ ಯಾವುದೋ ಒಂದು ಸಂಧಾನದಿಂದ ಅವರ ಸಂಖ್ಯೆ 11 ಆಗಿದೆ. ಈ ಕಡೆಗೆ ಕೇವಲ 9 ಜನರನ್ನು ಕೊಟ್ಟಿರುವುದು ನಿಜವಾಗಿಯೂ ನ್ಯಾಯವಾದುದಲ್ಲ. ಇದರಿಂದ ನ್ಯಾಯ ಸಮನಾಗಿ ದೊರಕುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ವಿರೋಧಪಕ್ಷವನ್ನು ತುಳಿಯತಕ್ಕ ಒಂದು ಕಾರ್ಯಕ್ಕೆ ಏಕೆ ಹೋದರೋ ಗೊತ್ತಾಗಲಿಲ್ಲ. ಈಗ ನಾನು ಅವರ ಮೇಲೆ ಇದರ ಬಗ್ಗೆ ಒಂದು ಗುರುತರವಾದ ಆರೋಪವನ್ನು ಮಾಡುತ್ತಿದ್ದೇನೆ. ಈ ಪಟ್ಟಿಯನ್ನು ಮೊದಲೇ ಮುಖ್ಯಮಂತ್ರಿಗಳು ಮಾಡಿದ್ದಾರೆಯೋ ಅಥವಾ ಅವರ ಪಕ್ಷದವರೆಲ್ಲರೂ ಸೇರಿ ತೀರ್ಮಾನ ಮಾಡಿದರೋ ನನಗೆ ಗೊತ್ತಾಗಲಿಲ್ಲ. ಈ ಸಭೆಯಲ್ಲಿ ಕೇವಲ ಎರಡು ಮೂರು ಮಾತ್ರ ವಿರೋಧ ಪಕ್ಷಗಳಿವೆಯೆಂದು ತಿಳಿದರೋ ಏನೋ ಗೊತಿ ಲ್ಲ. ವಿರೋಧ ಪಕ್ಷದವರು ಹೇಗಾದರೂ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ, ನಾವೇನು ಹೇಳಿದರೂ ನಮ್ಮ ಕಡೆ ಮೆಜಾರಿಟಿ ಇದೆ, ಅವರು ಒಪ್ಪಿಕೊಳ್ಳಬೇಕೆಂದು ಹೇಳತಕ್ಕ ಮನೋಭಾವನೆ ಇವರಿಗೆ ಬಂದಿರಬೇಕೆಂದು ನಾನು ಹೇಳುತ್ತೇನೆ. ಒಂದುವೇಳೆ ಆ ರೀತಿ ಮಾಡಿದರೆ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಒಂದು ಗುರುತರವಾದ ಜವಾಬ್ದಾರಿ ಹಾಗೂ ಕರ್ತವ್ಯದಲ್ಲಿ ಲೋಪ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಆರೋಪಣೆ ಮಾಡಬೇಕಾಗುತ್ತದೆ. ಯಾವ ಕಾರಣದಿಂದ ಈ ರೀತಿ ಮಾಡಿದರೋ ಎಂಬುದೇ ನನಗೆ ಗೊತ್ತಾಗುತ್ತಾ ಇಲ್ಲ. ಈಗ ಈ ನ್ಯೂಡಿ ಟೀಂ ಸಹ ಹೋಗಬೇಕೇ ಬೇಡವೇ ಎಂಬ ಬಗ್ಗೆ ಒಂದು ಸಂಶಯ ಈಗಾಗಲೇ ಬಂದಿದೆ. ಕೇವಲ 11 ಜನ ಆಡಳಿತ ಕಾಂಗ್ರೆಸ್ಸಿನವರು ಮಾತ್ರ ಅಲ್ಲಿಗೆ ಹೋಗಬೇಕೇ ಎಂಬ ಪ್ರಶ್ನೆ ಬಂದಿದೆ. ಇದನ್ನು ಜವಾಬ್ದಾರಿಯುತವಾಗಿ ಸರ್ಕಾರ ನಡೆಸಬೇಕಾಗಿದೆ. ಈಗ ಕ್ಷಾಮದ ದವಡೆಗೆ ಸಿಕ್ಕಿ ನರಳುತ್ತಿರುವ ಜನತೆಗೆ ನ್ಯಾಯವನ್ನು ದೊರಕಿಸಿ ಕೊಡುವುದರಲ್ಲಿ ಮೊದಲಿನಿಂದಲೂ ಒಂದು ಒಮ್ಮತದಿಂದ ನಾವೂ, ನೀವೂ ನಡೆಯಬೇಕೆಂದು